ಬರಗೂರು ರಾಮಚಂದ್ರಪ್ಪ

ಕಲೆ: ಗುರು ನಾವಳ್ಳಿ

# ಚಂಪಾ ವಿಭಿನ್ನ ದನಿಯ ಬಂಡಾಯಗಾರ

ಕವಿ, ನಾಟಕಕಾರ, ಪ್ರಬಂಧಕಾರ, 'ಸಂಕ್ರಮಣ' ಪತ್ರಿಕೆಯ ಸಂಪಾದಕ ಚಂದ್ರಶೇಖರ ಪಾಟೀಲ (18 ಜೂನ್ 1939 – 10 ಜನವರಿ 2022) ಇತ್ತೀಚೆಗೆ ನಿಧನರಾದರು. ಕನ್ನಡಪರ ಹೋರಾಟವನ್ನು ತಮ್ಮ ಬದುಕಿನ ಭಾಗವಾಗಿಸಿಕೊಂಡಿದ್ದ ಚಂಪಾ, ನಾಡು ಕಂಡ ಅಪರೂಪದ ಸಾಹಿತಿ. ಅವರ ಬದುಕು–ವ್ಯಕ್ತಿತ್ವ–ಬರಹದ ಬಗೆಗಿನ ಆಪ್ತ ಚಿತ್ರಣ ಇಲ್ಲಿದೆ.

'ಚಂಪಾ' ಎಂದೇ ಪ್ರಸಿದ್ಧರಾಗಿದ್ದ ಚಂದ್ರಶೇಖರ ಪಾಟೀಲರು ಇನ್ನಿಲ್ಲ. ಸದಾ ಪ್ರಗತಿಪರ ಸಂಘಟನೆಗಳ ಸ್ನೇಹಿತರಾಗಿದ್ದ 'ಚಂಪಾ' ಅವರ ನಿಧನವು ವೈಚಾರಿಕ ವಲಯಕ್ಕಾದ ದೊಡ್ಡ ನಷ್ಟ. ತಮ್ಮದೇ ವಿಶಿಷ್ಟ ಹಾಗೂ ವಿಭಿನ್ನ ಧಾಟಿಯಲ್ಲಿ ಪ್ರಗತಿಪರ ವಿಚಾರಗಳ ಮಂಡನೆ ಮತ್ತು ಪ್ರತಿಗಾಮಿ ವಿಚಾರಗಳ ಖಂಡನೆಯಲ್ಲಿ ಕ್ರಿಯಾಶೀಲರಾಗಿದ್ದ 'ಚಂಪಾ' ವ್ಯಕ್ತಿ ವಿಶಿಷ್ಟರೂ ಆಗಿದ್ದರು.

'ಚಂಪಾ' ಅವರನ್ನು ನಾನು ಮೊದಲು ನೋಡಿದ್ದು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಒಂದು ಫೋಟೊದಲ್ಲಿ. ಆಗಿನ್ನೂ ಅವರು 'ಚಂಪಾ' ಎಂದು ಜನಪ್ರಿಯರಾಗಿರಲಿಲ್ಲ. ನವ್ಯ ಕವಿ ಚಂದ್ರಶೇಖರ್ ಪಾಟೀಲ್ ಆಗಿದ್ದ ಅವರು ಮತ್ತು ಗಿರಡ್ಡಿ ಗೋವಿಂದರಾಜ ಅವರು ಒಟ್ಟಿಗೆ ಬ್ರಿಟನ್ ದೇಶದ ಲೀಡ್ಸ್‌ನಲ್ಲಿ ಹೆಚ್ಚಿನ ಅಧ್ಯಯನಕ್ಕಾಗಿ ಆಯ್ಕೆಯಾದ ಸುದ್ದಿಯೊಂದು ಫೋಟೊ ಸಮೇತ 'ಪ್ರಜಾವಾಣಿ'ಯಲ್ಲಿ ಬಂದಿತ್ತು. ಹೀಗೆ ಫೋಟೊದಲ್ಲಿ ನಾನು ನೋಡಿದ್ದ ಚಂಪಾ ಅವರ 'ನೇರ ಧೈರ್ಯ ದರ್ಶನ'ವಾದದ್ದು ಕೂಡ 'ಪ್ರಜಾವಾಣಿ'ಯ ಕಾರಣಕ್ಕೇ ಎಂಬುದು ಒಂದು ವಿಶೇಷ.